ಡಿ ಎಸ್ ಇ ಆರ್ ಟಿ
DSERT

# ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
# DEPARTMENT OF STATE EDUCATION RESEARCH AND TRAINING

**NO 4, 100 FT RING ROAD, BANASHANKARI 3RD STAGE**
**Bangalore-85**
E MAIL:dpi.dsert@gmail.com , http://dsert.kar.nic.in

TEL NO: 26422372
26422373
26422374
FAX NO:26422377


ಸಂಖ್ಯೆ: ಇಟಿಸಿ4/ಎಜು.ಕೈ.ಪು.ಮು/28/2009-10/2012-13
(ಭಾಗ-2)

ದಿನಾಂಕ: 05/05/2012

ವಿಷಯ: ಎಜುಸ್ಯಾಟ್ ಕೈಪಿಡಿಗಳ ಮುದ್ರಣ ಮತ್ತು ಸರಬರಾಜು ಕಾರ್ಯಕ್ಕಾಗಿ ದರಪಟ್ಟಿ ಆಹ್ವಾನಿಸಿದೆ.

—0—

2012-13ನೇ ಸಾಲಿಗೆ ಎಜುಸ್ಯಾಟ್ ಕೈಪಿಡಿಗಳನ್ನು ಮುದ್ರಿಸಿ ಆಯ್ದ 05 ಜಿಲ್ಲೆಗಳ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸರಬರಾಜು ಮಾಡಬೇಕಾಗಿರುತ್ತದೆ. ಕೈಪಿಡಿ ಅಂದಾಜು 310 ರಿಂದ 320 ಪುಟಗಳನ್ನು ಒಳಗೊಂಡಿರುತ್ತದೆ. ಹಾಗೂ 3500 ಪ್ರತಿಗಳನ್ನು ಡಿ ಟಿ ಪಿ ಸಹಿತ ಮುದ್ರಿಸಿದ ಕೈಪಿಡಿಗಳನ್ನು ಚಾಮರಾಜನಗರ, ಗುಲ್ಬರ್ಗಾ, ಯಾದಗಿರ್, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಬಿ.ಆರ್.ಸಿ ಕಛೇರಿಗಳಿಗೆ ನಿರ್ದಿಷ್ಟ ಪಡಿಸಿದ ಸಂಖ್ಯೆಯ ಪ್ರತಿಗಳನ್ನು ಬ್ಲಾಕ್‌ವಾರು ಬಂಡಲ್‌ಗಳನ್ನು ಮಾಡಿ ಸರಬರಾಜು ಮಾಡಬೇಕಾಗಿರುತ್ತದೆ )ಮುದ್ರಿಸಿ ಸರಬರಾಜು ಮಾಡಲು ಪ್ರತಿ ಪುಟಕ್ಕೆ ತಗಲುವ ದರವನ್ನು ಎಲ್ಲಾ ತೆರಿಗೆಗಳು ಸೇರಿದಂತೆ ಇಚ್ಛೆಯುಳ್ಳ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ. ಈ ದರಪಟ್ಟಿಯನ್ನು ದಿನಾಂಕ 15/05/2012 ರಂದು ಸಂಜೆ 5.00 ಘಂಟೆಯೊಳಗಾಗಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ನಂ.4, 100 ಅಡಿ ವರ್ತುಲ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು-85 ಇವರಿಗೆ ಸೀಲು ಮಾಡಿದ ಲಕೋಟೆಯಲ್ಲಿ ಸಲ್ಲಿಸಲು ತಿಳಿಸಿದೆ.

ಕೈಪಿಡಿಗಳ ಮುದ್ರಣಕ್ಕಾಗಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ದರಪಟ್ಟಿಯನ್ನು ನೀಡುವುದು.

1. ಮುಖಪುಟ ಮತ್ತು ಹಿಂಬದಿಯ ಪುಟಗಳನ್ನು ಬಹುವರ್ಣದಲ್ಲಿ 220 GSM ಆರ್ಟ ಬೋರ್ಡ ಕಾಗದದಲ್ಲಿ, ಒಳಪುಟಗಳನ್ನು ಏಕ ವರ್ಣದಲ್ಲಿ (ಕಪ್ಪು, ಬಿಳುಪು) 1/4th Crown 60 GSM ಮ್ಯಾಪ್ ಲಿಥೋ ಕಾಗದ ಪ್ರತಿ ಪುಟಕ್ಕೆ ತಗಲುವ ದರ.

**ಷರತ್ತುಗಳು**

1. ಒಳಪುಟಗಳನ್ನು 60 GSM ಮ್ಯಾಪ್ ಲಿಥೋ ಕಾಗದದಲ್ಲಿ ಏಕ ವರ್ಣದಲ್ಲಿ (ಕಪ್ಪು, ಬಿಳುಪು) ಮುದ್ರಿಸಬೇಕು.
2. ಕೈಪಿಡಿಗಳನ್ನು Perfect Binding ಮಾಡಬೇಕು.
3. ಡಿ.ಟಿ.ಪಿ ಮಾಡಿದ ಅಂತಿಮ ಸಾಮಗ್ರಿಯ Possitive/CD ನೀಡಬೇಕು.
4. ಮುದ್ರಿಸಬೇಕಾದ ಸಾಹಿತ್ಯವನ್ನು ಈ ಕಛೇರಿಯಿಂದ ಒದಗಿಸಲಾಗುವುದು, ಅಂತಿಮವಾಗಿ ಮುದ್ರಣ ಮಾಡುವ ಮೊದಲು ಕನಿಷ್ಠ 3 Proof ಗಳನ್ನು ನೀಡಿ ಅನುಮೋದನೆ ಪಡೆಯುವುದು.
5. ದರಪಟ್ಟಿ ಸಲ್ಲಿಸುವಾಗ KST/CST ನೊಂದಾಯಿಸಿರುವ ಬಗ್ಗೆ ದಾಖಲೆ ನೀಡಬೇಕು.
6. ನಿರ್ವಹಿಸಿದ ಕಾರ್ಯ ತೃಪ್ತಿಕರವಾಗಿದೆ ಎಂದು ಪರಿಶೀಲಿಸಿದ ನಂತರ ಹಣ ಪಾವತಿಸಲಾಗುವುದು. ಯಾವುದೇ ರೀತಿಯ ಮುಂಗಡ ಹಣ ನೀಡಲಾಗುವುದಿಲ್ಲ.
7. ಕಾರ್ಯಾದೇಶ ನೀಡುವ ಕುರಿತು ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.
8. EMD ಶೇ. 5ರಷ್ಟು ಬ್ಯಾಂಕ್ ಹುಂಡಿ ರೂಪದಲ್ಲಿ ನೀಡಬೇಕು.
9. ಈ ಮೇಲಿನ ಷರತ್ತುಗಳಿಗೆ ಒಳಪಟ್ಟು ದರಪಟ್ಟಿಯನ್ನು ದಿನಾಂಕ 15/05/2012ರಂದು ಸಂಜೆ 5.00 ಗಂಟೆಯೊಳಗಾಗಿ ಖುದ್ದಾಗಿ ಅಥವಾ ಅಂಚೆ ಮೂಲಕ ಮೇಲೆ ತಿಳಿಸಿರುವ ನಿರ್ದೇಶಕರ ವಿಳಾಸಕ್ಕೆ ಕಳುಹಿಸುವುದು.

10. ಸೀಲು ಮಾಡಿದ ಲಕೋಟೆ ಮೇಲೆ " ಎಜುಸ್ಯಾಟ್ ಕೈಪಿಡಿ ಮುದ್ರಣ ಮತ್ತು ಸರಬರಾಜಿಗಾಗಿ ದರಪಟ್ಟಿ" ಎಂದು ನಮೂದಿಸಬೇಕು.

11. ಕಾರ್ಯಾದೇಶವನ್ನು ನೀಡಿದ 15 ದಿನದೊಳಗಾಗಿ ಡಿ.ಟಿ.ಪಿ ಮಾಡಿದ 3 Proof ಗಳನ್ನು ನೀಡಿ ಅಂತಿಮ ಅನುಮೋದನೆಯನ್ನು ಪಡೆದುಕೊಳ್ಳಬೇಕು. ಅಂತಿಮ ಅನುಮೋದನೆ ಪಡೆದ ದಿನಾಂಕದಿಂದ 20 ದಿನದೊಳಗಾಗಿ ಮುದ್ರಿಸಿ ಬ್ಲಾಕ್‌ವಾರು ಬಂಡಲ್ ಮಾಡಿ ಮೇಲೆ ತಿಳಿಸಿರುವ ಬಿ.ಆರ್.ಸಿ ಕಛೇರಿಗಳಿಗೆ ಸರಬರಾಜು ಮಾಡಿ ಸಂಬಂಧಿಸಿದ ಕಛೇರಿಗಳ ಮುಖ್ಯಸ್ಥರುಗಳಿಂದ ಸಹಿ ಮಾಡಿಸಿದ Delivery Challan ಗಳನ್ನು ಈ ಕಛೇರಿಗೆ ತಲುಪಿಸಿದ ನಂತರ ಹಣ ಪಾವತಿಸಲು ಕ್ರಮಕೈಗೊಳ್ಳಲಾಗುವುದು.

ತಮ್ಮ ನಂಬುಗೆಯ,

ನಿರ್ದೇಶಕರು

ಡಿ.ಎಸ್.ಇ.ಆರ್.ಟಿ

D:\ETC-DD\y12-13\ETC4\Edusat- Hand book-Quat.doc